**83-K**

# 10 ನೇ ತರಗತಿ ವಿಜ್ಞಾನ ಮಾದರಿ ಪ್ರಶ್ನೆ ಪತ್ರಿಕೆ – 2

**ಸಮಯ: 3:15 ಗಂಟೆಗಳು** **ಗರಿಷ್ಠ ಅಂಕಗಳು: 80**

## ಭಾಗ : A

### ಭೌತವಿಜ್ಞಾನ

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.** **4 x 1 = 4**

1. ವಿದ್ಯುತ್ ಮಂಡಲದಲ್ಲಿ ಅನೇಕ ಬಾರಿ ರೋಧವನ್ನು ಬದಲಾಯಿಸಲು ಬಳಸುವ ಸಾಧನ
   ಎ) ರಿಯೋಸ್ಟಾಟ್ ಬಿ) ಅಮ್ಮೀಟರ್ ಸಿ) ವೋಲ್ಟಾ ಮೀಟರ್ ಡಿ) ರೋಧಕ
2. ಒಂದು ವಾಹಕದ ರೋಧವು 27Ω ಆಗಿದೆ. ಅದನ್ನು ಮೂರು ಸಮಭಾಗಗಳಾಗಿ ಕತ್ತರಿಸಿ ಸಮಾಂತರವಾಗಿ ಜೋಡಿಸಿದಾಗ ಅದರ ಒಟ್ಟು ರೋಧ
   ಎ) 6 Ω ಬಿ) 3 Ω ಸಿ) 9 Ω ಡಿ) 27 Ω
3. ಕಾಂತ ವಿದ್ಯುತ್ ಪ್ರವಾಹವಿರುವ ವಾಹಕದ ಮೇಲೆ ಗರಿಷ್ಠ ಬಲ ಪ್ರಯೋಗಿಸುವಾಗ ಅವುಗಳ ನಡುವಿನ ಕೋನ
   ಎ) 0 ಬಿ) 180 ಸಿ) 90 ಡಿ) 45
4. ಜೈವಿಕ ಅನಿಲದಲ್ಲಿ ಸುಮಾರು 75% ಇರುವ ಪ್ರಧಾನ ಅನಿಲ
   ಎ) ಬ್ಯೂಟೇನ್ ಬಿ) ಪ್ರೋಪೇನ್ ಸಿ) ಮೀಥೇನ್ ಡಿ) ಆಕ್ಸಿಜನ್

**II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **2 x 1 = 2**

5. ಸೊಲೆನಾಯ್ಡ್ ಎಂದರೇನು?
6. ಕಾಂತಕ್ಷೇತ್ರದಲ್ಲಿ ವಿದ್ಯುತ್ ಪ್ರವಹಿಸುತ್ತಿರುವ ವಾಹಕವನ್ನಿರಿಸಿದರೆ ಚಲಿಸುತ್ತದೆ. ಕಾರಣವೇನು?

**III. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **2 x 2 = 4**

7. ಅಮ್ಮೀಟರ್ ಮತ್ತು ವೋಲ್ಟಾ ಮೀಟರ್‌ಗಳನ್ನು ಒಳಗೊಂಡಿರುವ ರೋಧಗಳನ್ನು ಸಮಾಂತರವಾಗಿ ಸಂಪರ್ಕಿಸಿರುವ ವಿದ್ಯುತ್ ಮಂಡಲದ ಚಿತ್ರವನ್ನು ಬರೆಯಿರಿ.
8. ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ಶಕ್ತಿ ಮೂಲಗಳಿಗೆ ಇರುವ ಎರಡು ವ್ಯತ್ಯಾಸಗಳನ್ನು ಬರೆಯಿರಿ.

**IV. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **3 x 3 = 9**

9. ವಾಹಕದ ರೋಧ ಎಂದರೇನು? ವಾಹಕದ ರೋಧವು ಅವಲಂಬಿಸಿರುವ ಅಂಶಗಳು ಯಾವುವು?

   ಅಥವಾ

   ಎ) ಓಮನ ನಿಯಮವನ್ನು ನಿರೂಪಿಸಿ. ಅದರ ಗಣಿತೀಯ ರೂಪ ಬರೆಯಿರಿ.
   ಬಿ) ವಿದ್ಯುತ್ಪ್ರವಾಹದ ಉಷ್ಣೋತ್ಪಾದನಾ ಪರಿಣಾಮ ಎಂದರೇನು?
10. ಎ) ವಿದ್ಯುತ್ ವಾಹಕದ ಉಷ್ಣೋತ್ಪಾದನಾ ಪರಿಣಾಮದ ಯಾವುದಾದರೂ ಎರಡು ಪ್ರಾಯೋಗಿಕ ಅನ್ವಯಗಳನ್ನು ಬರೆಯಿರಿ.

    ಬಿ) ಒಂದು ಎಲೆಕ್ಟ್ರಿಕ್ ಬಲ್ಬನ್ನು 220V ಜನರೇಟರ್‌ಗೆ ಸಂಪರ್ಕಿಸಲಾಗಿದೆ. ಆ ಬಲ್ಬನಲ್ಲಿ 0.5A ವಿದ್ಯುತ್ ಪ್ರವಹಿಸಿದರೆ ಆ ಬಲ್ಬನ ಸಾಮರ್ಥ್ಯ ವೇಷ್ಟು?
11. ಒಂದು ವಸ್ತುವನ್ನು ಪೀನ ಮಸೂರದ ಈ ಕೆಳಗಿನ ಸ್ಥಾನಗಳಲ್ಲಿ ಇಟ್ಟಾಗ ಉಂಟಾಗುವ ಪ್ರತಿಬಿಂಬವನ್ನು ತೋರಿಸುವ ರೇಖಾಚಿತ್ರವನ್ನು ಬರೆಯಿರಿ.

    ಎ) ಪ್ರಧಾನ ಸಂಗಮ $F_1$ ನಲ್ಲಿ.

    ಬಿ) $2F_1$ ನಿಂದ ಹೊರಗೆ.

**V. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **1 x 4 = 4**

12. ಒಂದು ಪೀನಮಸೂರವು ಸೂಜಿಯ ಸತ್ಯ ಮತ್ತು ತಲೆಕೆಳಗಾದ ಪ್ರತಿಬಿಂಬವನ್ನು 50cm ದೂರದಲ್ಲಿ ಉಂಟುಮಾಡಿದೆ ಪ್ರತಿಬಿಂಬವು ವಸ್ತುವಿನ ಗಾತ್ರದಷ್ಟೇ ಇದ್ದರೆ ಸೂಜಿಯನ್ನು ಮಸೂರದ ಮುಂಭಾಗದಲ್ಲಿ ಇರಿಸಲಾಗಿದೆ ಹಾಗೂ ಮಸೂರದ ಸಾಮರ್ಥ್ಯವನ್ನು ಕಂಡುಹಿಡಿಯಿರಿ.

    ಅಥವಾ

    ಒಂದು ನಿಮ್ನ ಮಸೂರದ ಸಂಗಮದೂರ 30 ಸೆಂಟಿಮೀಟರ್ ಆದರೆ ಒಂದು ವಸ್ತುವನ್ನು ನಾವು ಮಸೂರದಿಂದ ಎಷ್ಟು ದೂರದಲ್ಲಿದ್ದಾಗ ನಮಗೆ 90 ಸೆಂಟಿಮೀಟರ್ ವಸ್ತುವಿನ ಪ್ರತಿಬಿಂಬ ಮೂಡುತ್ತದೆ? ಮಸೂರದ ವರ್ಧನೆಯನ್ನು ಕಂಡುಹಿಡಿಯಿರಿ.

**VI. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **1 x 5 = 5**

13. ಎ) ವಿದ್ಯುತ್ ಮೋಟಾರ್ ಯಾವ ತತ್ವದ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತದೆ? ವಿದ್ಯುತ್ ಮೋಟಾರ್‌ನಲ್ಲಿ ವಾಹಕದ ಮೇಲೆ ಉಂಟಾಗುವ ಬಲದ ದಿಕ್ಕನ್ನು ತಿಳಿಯಲು ಉಪಯೋಗಿಸುವ ನಿಯಮವನ್ನು ನಿರೂಪಿಸಿ.
    ಬಿ) ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಉಂಟಾಗುವ ಎರಡು ಸಂದರ್ಭಗಳನ್ನು ತಿಳಿಸಿರಿ.

## ಭಾಗ : B
## ರಸಾಯನವಿಜ್ಞಾನ

**VII. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.** **2 x 1 = 2**

14. ಪ್ರೋಪೆನಾಲ್ ಯಾವ ಗುಂಪಿಗೆ ಸೇರುತ್ತದೆ?
    ಎ) ಆಲ್ಡಿಹೈಡ್ ಬಿ) ಕೀಟೋನ್ ಸಿ) ಕಾರ್ಬಾಕ್ಸಿಲಿಕ್ ಆಮ್ಲ ಡಿ) ಆಲ್ಕೋಹಾಲ್
15. ಅತ್ಯಂತ ಕ್ರಿಯಾಶೀಲ ಲೋಹಗಳ ಆಕ್ಸೈಡ್‌ಗಳನ್ನು ಆಕರ್ಷಿಸಿ ಲೋಹಗಳನ್ನು ಈ ಕೆಳಗಿನ ವಿಧಾನದಿಂದ ಪಡೆಯುವರು
    ಎ) ವಿದ್ಯುದ್ವಿಭಜನೆಯ ಅಪಕರ್ಷಣೆ ಬಿ) ಕಾರ್ಬನ್ ನೊಂದಿಗೆ ಕಾಸುವುದು
    ಸಿ) ಅಲ್ಯುಮಿನಿಯಂನೊಂದಿಗೆ ಕಾಸುವುದು ಡಿ) ದ್ರವಿಸುವಿಕೆ

**VIII. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **4 x 1 = 4**

16. ತಟಸ್ಥೀಕರಣ ಕ್ರಿಯೆ ಎಂದರೇನು?
17. ಬ್ಯೂಟೇನ್ ಚುಕ್ಕೆ ಸೂತ್ರವನ್ನು ಬಿಡಿಸಿ.
18. ಆಧುನಿಕ ಆವರ್ತಕ ಕೋಷ್ಟಕದ ನಿಯಮವನ್ನು ನಿರೂಪಿಸಿ.
19. ಕಟನೀಕರಣ ಎಂದರೇನು?

**IX. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **3 x 2 = 6**

20. ಫೆರಸ್ ಸಲ್ಫೇಟ್ ದ್ರಾವಣಕ್ಕೆ ಸತುವನ್ನು ಸೇರಿಸಿದಾಗ ರಾಸಾಯನಿಕ ಕ್ರಿಯೆ ನಡೆಯುತ್ತದೆಯೇ? ನಿಮ್ಮ ಉತ್ತರವನ್ನು ಸಮರ್ಥಿಸಿ.
21. 4 ಕಾರ್ಬನ್ ಪರಮಾಣುಗಳನ್ನು ಹೊಂದಿರುವ ಕೀಟೋನನ್ನು ಹೆಸರಿಸಿ ಮತ್ತು ಅದರ ರಚನಾ ಸೂತ್ರ ಬರೆಯಿರಿ.
22. ಕೆಳಗೆ ಆವರ್ತ ಕೋಷ್ಟಕದ ಭಾಗವನ್ನು ಕೊಡಲಾಗಿದೆ

| | | | | | | | |
|---|---|---|---|---|---|---|---|
| H | | | | | | | He |
| Li | Be | B | C | N | O | F | Ne |
| Na | Mg | Al | Si | P | S | Cl | Ar |

ಕೋಷ್ಟಕವನ್ನು ಬಳಸಿ ಈ ಕೆಳಗಿನ ಹೇಳಿಕೆಗಳ ಕಾರಣ ಕೊಡಿ.
ಎ) Li ಮತ್ತು Na ಅನ್ನು ಕ್ರಿಯಾಶೀಲ ಲೋಹಗಳು ಎನ್ನುತ್ತಾರೆ.
ಬಿ) Mg ಪರಮಾಣು ಗಾತ್ರ Na ಗಿಂತ ಕಡಿಮೆ.

**ಅಥವಾ**

A, B, C, D ಮತ್ತು E ಪರಮಾಣು ಸಂಖ್ಯೆಗಳನ್ನು ಕೆಳಗೆ ನೀಡಲಾಗಿದೆ.
ಈ ಪಟ್ಟಿಯನ್ನು ಗಮನಿಸಿ ಪ್ರಶ್ನೆಗಳಿಗೆ ಉತ್ತರಿಸಿ.

| ಧಾತುಗಳು | A | B | C | D | E |
|---|---|---|---|---|---|
| ಪರಮಾಣು ಸಂಖ್ಯೆ | 7 | 10 | 12 | 4 | 19 |

ಎ) ಯಾವ ಎರಡು ಧಾತುಗಳು ರಾಸಾಯನಿಕವಾಗಿ ಹೋಲುತ್ತವೆ?
ಬಿ) ಯಾವುದು ಜಡಾನಿಲವಾಗಿದೆ?
ಸಿ) ಯಾವ ಧಾತು ಆವರ್ತಕ ಕೋಷ್ಟಕದ ಮೂರನೇ ಆವರ್ತಕ್ಕೆ ಸೇರಿದೆ?
ಡಿ) ಇವುಗಳಲ್ಲಿ ಯಾವುದು ಅಲೋಹವಾಗಿದೆ?



9

**X. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **3 x 3 = 9**

23. ಸಾರರಿಕ್ತ ಸಲ್ಫ್ಯೂರಿಕ್ ಆಮ್ಲದೊಂದಿಗೆ ಸತುವಿನ ಚೂರುಗಳ ವರ್ತನೆ ಹಾಗೂ ಉರಿಸುವಿಕೆ ಮೂಲಕ ಹೈಡ್ರೋಜನ್ ಅನಿಲದ ಪರೀಕ್ಷೆಯ ಚಿತ್ರ ಬರೆದು ಭಾಗಗಳನ್ನು ಗುರುತಿಸಿ.
24. ಸಂಕಲನ ಕ್ರಿಯೆ ಎಂದರೇನು? ಮೀಥೇನ್ ಸಂಕಲನ ಕ್ರಿಯೆಯಲ್ಲಿ ಪಾಲ್ಗೊಳ್ಳುವುದಿಲ್ಲ ಆದರೆ ಈಥೀನ್ ಪಾಲ್ಗೊಳ್ಳುತ್ತದೆ ಕಾರಣ ಕೊಡಿ.

ಅಥವಾ

ಆದೇಶನ ಕ್ರಿಯೆಯನ್ನು ಒಂದು ಉದಾಹರಣೆ ಮತ್ತು ರಾಸಾಯನಿಕ ಸಮೀಕರಣದೊಂದಿಗೆ ವಿವರಿಸಿ.

25. ಲೋಹದ ಮೇಲೆ ಹಬೆಯ ವರ್ತನೆ ಚಿತ್ರ ಬರೆದು ಭಾಗಗಳನ್ನು ಗುರುತಿಸಿ.

**XI. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **4 x 1 = 4**

26. ಥರ್ಮೈಟ್ ಕ್ರಿಯೆಯಲ್ಲಿ ಕಬ್ಬಿಣದ ಸಂಯುಕ್ತವು ಲೋಹದೊಂದಿಗೆ ವರ್ತಿಸಿದೆ.
   ಎ) ಈ ಕ್ರಿಯೆಯಲ್ಲಿ ಉಪಯೋಗಿಸಿದ ಲೋಹವನ್ನು ಹೆಸರಿಸಿ.
   ಬಿ) ಈ ಕ್ರಿಯೆಯು ನಡೆದ ನಂತರ ದ್ರವಿತ ಸ್ಥಿತಿಯಲ್ಲಿ ದೊರೆಯುವ ಲೋಹ ಯಾವುದು?
   ಸಿ) ಈ ಕ್ರಿಯೆಯ ಸರಿದೂಗಿಸಿದ ರಾಸಾಯನಿಕ ಸಮೀಕರಣ ಬರೆಯಿರಿ.
   ಡಿ) ಈ ಕ್ರಿಯೆಯ ಹೆಚ್ಚು ಸಾಮಾನ್ಯ ಉಪಯೋಗವನ್ನು ತಿಳಿಸಿ.

## ಭಾಗ : C
## ಜೀವವಿಜ್ಞಾನ

**XII. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.** **2 x 1 = 2**

27. ಜೈವಿಕ ವಿಘಟನೆಗೆ ಒಳಪಡದ ತ್ಯಾಜ್ಯಗಳ ನಿರ್ವಹಣೆಗೆ ಈ ವಿಧಾನ ಉತ್ತಮ ಪರಿಹಾರವಾಗಿದೆ.
   ಎ) ದಹಿಸುವುದು ಬಿ) ರಾಶಿ ಹಾಕುವುದು
   ಸಿ) ಹೂತುಹಾಕುವುದು ಡಿ) ಮರುಚಕ್ರೀಕರಣ ಗೊಳಿಸುವುದು
28. ಕೆಳಗೆ ಕೊಟ್ಟಿರುವ ಚಿತ್ರವನ್ನು ಗಮನಿಸಿ ಬಾಣದ ಗುರುತಿನ ವರ್ತನೆಯನ್ನು ತಿಳಿಸಿ.



   ಎ) ಧನ ಗುರುತ್ವಾನುವರ್ತನೆ ಬಿ) ಋಣ ಗುರುತ್ವಾನುವರ್ತನೆ
   ಸಿ) ಜಲಾನುವರ್ತನೆ ಡಿ) ತಾಪ ಅನುವರ್ತನೆ

**XIII. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **2 x 1 = 2**

29. ಕಾಗದದ ಚೀಲಗಳು ಪ್ಲಾಸ್ಟಿಕ್ ಚೀಲಗಳಿಗಿಂತ ಹೇಗೆ ಉತ್ತಮ?
30. ಚಿಪ್ಕೋ ಚಳುವಳಿಯ ಎರಡು ಗುರಿಗಳು ಯಾವುವು?

**XIV. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **3 x 2 = 6**

31. ಒಂದು ಹೂವಿನ ನೀಳಛೇದ ನೋಟದ ಚಿತ್ರ ಬರೆದು ಭಾಗಗಳನ್ನು ಗುರುತಿಸಿ.
32. ಸ್ತನಿಗಳಲ್ಲಿ ಮತ್ತು ಪಕ್ಷಿಗಳಲ್ಲಿ ಆಕ್ಸಿಜನ್‌ಯುಕ್ತ ಮತ್ತು ಆಕ್ಸಿಜನ್‌ರಿಕ್ತ ರಕ್ತಗಳನ್ನು ಪ್ರತ್ಯೇಕಿಸುವುದು ಅಗತ್ಯವಾಗಿದೆ. ಏಕೆ?

ಅಥವಾ

ಸಸ್ಯಗಳು ತ್ಯಾಜ್ಯ ಪದಾರ್ಥಗಳನ್ನು ಹೊರ ಹಾಕಲು ಬಳಸುವ ವಿಧಾನಗಳು ಯಾವುವು?

33. ಇತ್ತೀಚಿನ ದಿನಗಳಲ್ಲಿ ನೈಸರ್ಗಿಕ ಸಂಪನ್ಮೂಲಗಳ ಪ್ರಜ್ಞಾಪೂರ್ವಕ ಬಳಕೆ ಅನಿವಾರ್ಯವಾಗಿದೆ. ಏಕೆ? ನಿಮ್ಮ ಉತ್ತರಕ್ಕೆ ಕಾರಣಗಳನ್ನು ನೀಡಿ.

**XV. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **3 x 3 = 9**

34. ಮಾನವನ ಹೃದಯದ ನೀಳಛೇದ ನೋಟದ ಚಿತ್ರ ಬರೆದು ಭಾಗಗಳನ್ನು ಗುರುತಿಸಿ.
35. ಎ) ಗರ್ಭನಿರೋಧಕತೆಯ ವಿವಿಧ ವಿಧಾನಗಳು ಯಾವುವು?
   ಬಿ) ಟೆಸ್ಟೋಸ್ಟೀರಾನ್ ಹಾರ್ಮೋನಿನ ಕಾರ್ಯವೇನು?

ಅಥವಾ

ಎ) ತಾಯಿಯ ದೇಹದೊಳಗೆ ಭ್ರೂಣವು ಹೇಗೆ ಪೋಷಣೆಯನ್ನು ಪಡೆಯುತ್ತದೆ?

ಬಿ) ಅಂಡಾಶಯದಿಂದ ಗರ್ಭಕೋಶಕ್ಕೆ ಸಂಪರ್ಕ ಕಲ್ಪಿಸುವ ನಾಳವನ್ನು ಹೆಸರಿಸಿ.

36. ಎ) ರಚನಾನುರೂಪಿ ಅಂಗಗಳು ಎಂದರೇನು?

ಬಿ) ಮಾನವರಲ್ಲಿ ಲಿಂಗ ನಿರ್ಧಾರಣೆ ಯನ್ನು ವಿವರಿಸಿ.

ಅಥವಾ

ಎ) ಪ್ರಭೇದಿಕರಣ ಎಂದರೇನು?

ಬಿ) ಅಲೈಂಗಿಕ ಸಂತಾನೋತ್ಪತ್ತಿಯಿಂದಾದ ಭಿನ್ನತೆಗಳಿಗಿಂತ ಲೈಂಗಿಕ ಸಂತಾನೋತ್ಪತ್ತಿಯಿಂದಾದ ಭಿನ್ನತೆಗಳು ಹೆಚ್ಚು ಸಮರ್ಥವಾಗಿರುತ್ತವೆ ಎಂಬುದನ್ನು ವಿವರಿಸಿ.

**XVI. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **2 x 4 = 8**

37. ಎ) ಭಿನ್ನತೆ ಎಂದರೇನು? ಇದು ಪ್ರಭೇದಕ್ಕೆ ಹೇಗೆ ಅನುಕೂಲಕರವಾಗಿದೆ?

ಬಿ) ದ್ವಿತಳೀಕರಣ ಚೆಕ್ಕರ್ ಬೋರ್ಡ್ ಬರೆದು ಅದರ ವ್ಯಕ್ತರೂಪ ನಮೂನೆಯ ಅನುಪಾತವನ್ನು ಬರೆಯಿರಿ.

38. ಎ) ಥೈರಾಕ್ಸಿನ್ ಹಾರ್ಮೋನ್ ಉತ್ಪಾದನೆಗೆ ಅಗತ್ಯವಾದ ಖನಿಜವನ್ನು ಹೆಸರಿಸಿ. ಈ ಹಾರ್ಮೋನ್‌ನಿಂದ ನಮ್ಮ ದೇಹಕ್ಕೆ ಆಗುವ ಉಪಯೋಗವೇನು?

ಬಿ) ಮಾನವನ ಮೆದುಳಿನಲ್ಲಿ ಐಚ್ಛಿಕ ಮತ್ತು ಅನೈಚ್ಛಿಕ ಕ್ರಿಯೆಗಳನ್ನು ನಿಯಂತ್ರಿಸುವ ಭಾಗಗಳನ್ನು ಹೆಸರಿಸಿ.